NOVEMBER 24, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ‘ಕೂಲಿಗಲ್ಲ, ಶಾಲೆಗೆ’ ಅಭಿಯಾನ; ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಿಂದ, ಧಾರವಾಡ ಜಿಲ್ಲೆಯಲ್ಲಿ, ಶೀಘ್ರ ಚಾಲನೆ.
- ‘ಪುಸ್ತಕದ ಗೂಡು’; ಕಲಬುರಗಿ ಜಿಲ್ಲೆಯ, 11 ತಾಲೂಕುಗಳಲ್ಲಿ, 5 ಸಾವಿರದ 97 ಪುಸ್ತಕಗಳ ಸಂಗ್ರಹ.
- ಕೇಂದ್ರದಿಂದ, ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳು, ಜಾರಿಗೆ; 29 ವಿಭಿನ್ನ ಕಾರ್ಮಿಕ ಕಾನೂನುಗಳು, ರದ್ದು.
- ‘ಖೇಲೋ ಇಂಡಿಯಾ’; ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ, ರಾಜ್ಯದ 19 ಜಿಲ್ಲೆಗಳ, ಬಾಲಕಿಯರ ಆಯ್ಕೆ ಪ್ರಕ್ರಿಯೆ.

<><><>

ಈಗ ವಾರ್ತೆಗಳ ವಿವರ

<><><>

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿಯನ್ನು, ಬೇರು ಸಮೇತ ಕೀಳಲು, ಪ್ರಾಯೋಗಿಕವಾಗಿ, ಧಾರವಾಡ ಜಿಲ್ಲಾಡಳಿತದೊಂದಿಗೆ, ವಿನೂತನ ‘ಕೂಲಿಗಲ್ಲ, ಶಾಲೆಗೆ’ ಅಭಿಯಾನಕ್ಕೆ, ಶೀಘ್ರ ಚಾಲನೆ ನೀಡಲಿದೆ. ಅನುಷ್ಠಾನದ ಬಳಿಕ, ಯೋಜನೆಯ ಸಾಧಕಗಳನ್ನು ಅಭ್ಯಸಿಸಿ, ರಾಜ್ಯದ ಎಲ್ಲ 31 ಜಿಲ್ಲೆಗಳಿಗೆ ವಿಸ್ತರಿಸುವ, ಯೋಚನೆ–ಯೋಜನೆ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಹೊಂದಿದೆ ಎಂದು, ಆಯೋಗದ ಸದಸ್ಯ ಶೇಖರಗೌಡ ರಾಮತ್ನಾಳ, ಹುಬ್ಬಳ್ಳಿಯ, ಕಾರ್ಮಿಕ ಇಲಾಖೆ ಸಭಾಂಗಣದಲ್ಲಿ, ಅಭಿಯಾನದ ಕುರಿತು, ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ, ಪೂರ್ವಭಾವಿ ಸಭೆ ನಡೆಸಿ, ಪ್ರಕಟಿಸಿದರು.

<><><>

ಈ ಕುರಿತು, ಒಂದು ವರದಿ

<><><>

*ಭಾರತೀಯ ಸಂವಿಧಾನ, ಪರಿಚ್ಛೇದ 21 (ಎ) ಅಡಿ, 14 ವ ರ್ದೊಳಗಿನ ಮಕ್ಕಳಿಗೆ, ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು, ಮೂಲಭೂತ ಹಕ್ಕಾಗಿಸಿದೆ. ಪರಿಚ್ಛೇದ 24 ರನ್ವಯ, 14 ವ ರ್ದೊಳಗಿನ ಮಕ್ಕಳು, ಅಪಾಯಕಾರಿ ಕ್ಷೇತ್ರಗಳಲ್ಲಿ ದುಡಿಯುವುದನ್ನು,*

*ಕಡ್ಡಾಯವಾಗಿ ನಿ ೇಧಿಸಿದೆ. ಕಿಶೋರ ಕಾರ್ಮಿಕ ಪದ್ಧತಿ ನಿ ೇಧ ಹಾಗೂ ಹದಿ ಹರೆಯದ ಮಕ್ಕಳ ದುಡಿಮೆ ನಿಯಂತ್ರಣ ಕಾಯ್ದೆ 1986 ಹಾಗೂ ತಿದ್ದುಪಡಿ ಕಾಯ್ದೆ 2016, ಪ್ರಸ್ತುತ ಜಾರಿಯಲ್ಲಿದೆ. ಧಾರವಾಡ ಜಿಲ್ಲೆಯಲ್ಲಿ, ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಪತ್ತೆಹಚ್ಚಲು, ಮಕ್ಕಳ ರಕ್ಷಣಾ ಘಟಕದ ಜಾಗೃತ ದಳ ಹಾಗೂ ವಿಶೇಷ ಕಾರ್ಯಪಡೆ, ಈ ವರೆಗೆ, ಒಟ್ಟು 358 ತಪಾಸಣೆಗಳನ್ನು ಕೈಗೊಂಡು, ಮೂವರು ಬಾಲ ಹಾಗೂ 16 ಕಿಶೋರ ಕಾರ್ಮಿಕರನ್ನು ರಕ್ಷಿಸಿ, ಮಕ್ಕಳ ಕಲ್ಯಾಣ ಸಮಿತಿ ಸುಪರ್ದಿಗೆ ವಹಿಸಿದೆ. ತಪ್ಪಿತಸ್ಥರ ಮೇಲೆ, ಕಾನೂನಿನ ಅಡಿ, ಪ್ರಕರಣಗಳು ದಾಖಲಾಗಿವೆ.*

<><><>

*ಈ ಹಿನ್ನೆಲೆಯಲ್ಲಿ, ವಿನೂತನ, 'ಕೂಲಿಗಿಲ್ಲ, ಕೆಲಸಕ್ಕಲ್ಲ, ಶಾಲೆಗೆ' ಅಭಿಯಾನದ ಕುರಿತು. ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲಾಧಿಕಾರಿ, ದಿವ್ಯಾ ಪ್ರಭು.*

<><><>

ವಿವೇಕ (59) + ಜಿಲ್ಲಾಧಿಕಾರಿ ದಿವ್ಯಾ ಪ್ರಭು ಧ್ವನಿ (60) ಸೆಕೆಂದುಗಳು

<><><>

ರಾಜ್ಯದ ಗ್ರಾಮೀಣ ಮಕ್ಕಳಲ್ಲಿ, ಓದುವ ಹವ್ಯಾಸವನ್ನು ಉತ್ತೇಜಿಸಲು, 'ಪುಸ್ತಕದ ಗೂಡು' ಯೋಜನೆ ರೂಪಿಸಲಾಗಿದೆ ಎಂದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್ ಖಾತೆ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ಕಲಬುರಗಿ ಜಿಲ್ಲೆಯ, 11 ತಾಲೂಕುಗಳಲ್ಲಿ, 'ಪುಸ್ತಕ ಜೋಳಿಗೆ' ಅಭಿಯಾನದ ಮೂಲಕ, 5 ಸಾವಿರದ 97 ಪುಸ್ತಕಗಳು ಸಂಗ್ರಹವಾಗಿವೆ. ಜನರಲ್ಲಿ ತಮ್ಮ ಪುಸ್ತಕಗಳನ್ನು ಹಂಚುವ ಉತ್ಸಾಹವನ್ನು ತೋರಿಸುತ್ತದೆ ಎಂದು, ಸಾಮಾಜಿಕ ಮಾಧ್ಯಮ, ಫೇಸ್‌ಬುಕ್ ನಲ್ಲಿ ಹೇಳಿದ್ದಾರೆ. 'ಎದೆಗೆ ಬಿದ್ದ ಅಕ್ಷರ, ಭೂಮಿಗೆ ಬಿದ್ದ ಬೀಜ, ಇಂದಲ್ಲ ನಾಳೆ ಫಲ ಕೊಡುವುದು' ಎನ್ನುವ, ಚಿಂತಕ, ಸಾಹಿತಿ, ದೇವನೂರು ಮಹಾದೇವ ಅವರ ಮಾತು, ಜ್ಞಾನಾರ್ಜನೆಯಿಂದ, ವಯಕ್ತಿಕ ಬದುಕು ಮಾತ್ರವಲ್ಲ; ಸಮಾಜವನ್ನೂ ಬದಲಿಸುವ ಶಕ್ತಿ ಹೊಂದಿದೆ ಎಂದು, ಹರ್ಷ ವ್ಯಕ್ತ ಪಡಿಸಿದ್ದಾರೆ.

<><><>

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ, 7 ಜಿಲ್ಲೆಗಳ ಗ್ರಾಮೀಣ ಭಾಗದ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಅನುದಾನವನ್ನು ಮೀಸಲಿರಿಸಿ, ಆದ್ಯತೆ ನೀಡಲಾಗುತ್ತಿದೆ ಎಂದು, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ, ಎನ್.ಎಸ್. ಬೋಸರಾಜು, ತಿಳಿಸಿದ್ದಾರೆ. ರಾಯಚೂರು ಜಿಲ್ಲೆ, ಮಾನ್ವಿ ತಾಲೂಕು, ಮರಾಠ ಗ್ರಾಮದಲ್ಲಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ, ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ, 50 ಲಕ್ಷ ರೂಪಾಯಿ ವೆಚ್ಚದಲ್ಲಿ, 4 ಹೆಚ್ಚುವರಿ ವರ್ಗ ಕೋಣೆಗಳ ನಿರ್ಮಾಣಕ್ಕೆ, ಸಂಸದ ಜಿ.ಕುಮಾರ ನಾಯಕ ಹಾಗೂ ಶಾಸಕ ಹಂಪಯ್ಯ ನಾಯಕ ಅವರೊಂದಿಗೆ, ಸಚಿವರು ಚಾಲನೆ ನೀಡಿ, ಮಾತನಾಡಿದರು.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..

(56 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ರಾಷ್ಟ್ರೀಯ ಕೆಡೆಟ್ ಕಾರ್ಪ್ಸ್, ಎನ್.ಸಿ.ಸಿ. 78ನೇ ಸಂಸ್ಥಾಪನಾ ದಿನವನ್ನು, ಕರ್ನಾಟಕ ಸೇರಿದಂತೆ, ದೇಶಾದ್ಯಂತ ಅರ್ಥಪೂರ್ಣ ಕಾರ್ಯಕ್ರಮಗಳ ಮೂಲಕ, ಕೆಡೆಟ್‌ಗಳು ಆಚರಿಸಿದರು. ರಕ್ತದಾನ ಶಿಬಿರ, 'ಏಕ್ ಪೇಡ್ ಮಾ ಕೇ ನಾಮ್' ವೃಕ್ಷಾರೋಪಣ ಅಭಿಯಾನ, ಸ್ವಚ್ಛತಾ ಹೀ ಸೇವಾ, ಮಾದಕ ದ್ರವ್ಯ ವಿರೋಧಿ ಜಾಗೃತಿ, ಮುಂತಾದ ಸಾರ್ವಜನಿಕ ಹಿತದ ಸೇವೆಯ ಮೂಲಕ, ಗಮನ ಸೆಳೆದರು. ಮುಖ್ಯಮಂತ್ರಿಯವರ ಪದಕ ವಿಜೇತ, ಎನ್.ಸಿ.ಸಿ ಆರ್ಮಿ ವಿಂಗ್ ನಿವೃತ್ತ ಅಧಿಕಾರಿ, ಹಾಗೂ ಶಿಕ್ಷಕ ಧಾರವಾಡದ ಮಲ್ಲಿಕಾರ್ಜುನ ಚಿಕ್ಕಮಠ, ವಿದ್ಯಾರ್ಥಿ ಜೀವನದಲ್ಲಿ, ಎನ್.ಸಿ.ಸಿ. ಪಾತ್ರದ ಕುರಿತು, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ಶಿಕ್ಷಕ ಮಲ್ಲಿಕಾರ್ಜುನ ಚಿಕ್ಕಮಠ ಧ್ವನಿ 60 ಸೆಕೆಂದುಗಳು

<><><>

'ಖೇಲೋ ಇಂಡಿಯಾ' ಉಪಕ್ರಮದಡಿ, ರಾಜ್ಯದ 19 ಜಿಲ್ಲೆಗಳ, 14 ಹಾಗೂ 16 ವ ರ್ಷದ ಒಳಗಿನ ಬಾಲಕಿಯರಿಗೆ, ವಿವಿಧ ಕ್ರೀಡೆಗಳಲ್ಲಿ ತರಬೇತಿ ನೀಡಲು, ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ, ಆಯ್ಕೆ ಪ್ರಕ್ರಿಯೆ ಜರುಗಿತು. ಭಾರತೀಯ ಕ್ರೀಡಾ ಪ್ರಾಧಿಕಾರದ ತರಬೇತುದಾರರು, ಆಯ್ಕೆ ಪ್ರಕ್ರಿಯೆ ಸಂಘಟಿಸಿದರು. 2036ರ ಒಲಿಂಪಿಕ್ ಕ್ರೀಡಾಕೂಟದಲ್ಲಿ, ಭಾರತೀಯ ಕ್ರೀಡಾಪಟುಗಳು, ಅತೀ ಹೆಚ್ಚು ಪದಕ ಗೆಲ್ಲುವಂತಾಗಲಿ ಎಂಬ, ಮಹದೋದ್ದೇಶದಿಂದ, ಆಯ್ಕೆ ಪ್ರಕ್ರಿಯೆ ಸಂಘಟಿಸಲಾಗಿದೆ.

<><><>

ಕೇಂದ್ರ ಸರ್ಕಾರ, ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳನ್ನು, ಅಧಿಸೂಚನೆ ಮೂಲಕ ಕಳೆದ 21 ರಂದು ಜಾರಿಗೊಳಿಸಿದ್ದು, ಹಲವು ದಶಕಗಳಿಂದ ಅಸ್ತಿತ್ವದಲ್ಲಿದ್ದ, 29 ವಿಭಿನ್ನ ಕಾರ್ಮಿಕ ಕಾನೂನುಗಳನ್ನು, ರದ್ದು ಪಡಿಸಿದೆ. ವೇತನ ಸಂಹಿತೆ 2019, ಕೈಗಾರಿಕಾ ಸಂಬಂಧಗಳ ಸಂಹಿತೆ 2020, ಸಾಮಾಜಿಕ ಭದ್ರತಾ ಸಂಹಿತೆ 2020 ಮತ್ತು ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ 2020, ನೂತನವಾಗಿ ಜಾರಿಗೊಂಡ, ಕಾರ್ಮಿಕ ಸಂಹಿತೆಗಳಾಗಿವೆ.

<><><>

ಎಲ್ಲ ವರ್ಗಗಳ ಕಾರ್ಮಿಕರಿಗೆ, ಸಕಾಲದಲ್ಲಿ ಕನಿಷ್ಟ ವೇತನ ಖಾತ್ರಿ, ನೇಮಕಾತಿ ಪತ್ರ ನೀಡಿಕೆ ಕಡ್ಡಾಯ, ಮಹಿಳೆಯರಿಗೆ ಸಮಾನ ವೇತನ ಮತ್ತು ಗೌರವ, 40 ಕೋಟಿ ಕಾರ್ಮಿಕರಿಗೆ, ಸಾಮಾಜಿಕ ಭದ್ರತೆಯ ವಿಸ್ತರಣೆ, ಒಂದು ವ ರ್ಷದ ಉದ್ಯೋಗದ ನಂತರ, ನಿಶ್ಚಿತಾವಧಿಯ ನೌಕರರಿಗೆ ಗ್ರಾಚ್ಯುಟಿ, 40 ವ ರ್ಷಕ್ಕಿಂತ ಮೇಲ್ಪಟ್ಟ ಕಾರ್ಮಿಕರಿಗೆ, ಉಚಿತ ವಾರ್ಷಿಕ ಆರೋಗ್ಯ ತಪಾಸಣೆ, ಹೆಚ್ಚುವರಿ ಕೆಲಸಕ್ಕೆ ದುಪ್ಪಟ್ಟು ವೇತನ ನೀಡುವುದು ಸೇರಿದಂತೆ, ಹಲವು ಅಂಶಗಳನ್ನು, ಹೊಸ ಕಾರ್ಮಿಕ ಸಂಹಿತೆಗಳು ಒಳಗೊಂಡಿವೆ.

<><><>

ನಿಧನ ವಾರ್ತೆ

<><><>

ಖ್ಯಾತ ಕೊಳಲು ವಾದಕ, ಪಂಡಿತ್ ಬಾಬುಜಿ ನಾಯ್ಕೋಡಿ, ವಿಜಯಪುರದಲ್ಲಿ ನಿನ್ನೆ ನಿಧನರಾದರು. ಅವರಿಗೆ 87 ವರ್ಷ ವಯಸ್ಸಾಗಿತ್ತು. ಆಕಾಶವಾಣಿ ಹಾಗೂ ದೂರದರ್ಶನದ, ಹಿರಿಯ ಕಲಾವಿದರಾಗಿದ್ದ ಬಾಬುಜಿ, ಅನೇಕ ಪುರಸ್ಕಾರಗಳಿಗೆ ಭಾಜನರಾಗಿದ್ದರು. ಇಂದು ಬೆಳಗ್ಗೆ 10 ಗಂಟೆಗೆ, ವಿಜಯಪುರದ ಮನಗೂಳಿ ಅಗಸಿಯ ರುದ್ರಭೂಮಿಯಲ್ಲಿ, ಪಾರ್ಥಿವ ಶರೀರದ ಅಂತ್ಯಕ್ರಿಯೆ ಜರುಗಲಿದೆ.

<><><>

ಬಾಗಲಕೋಟೆ ತಾಲೂಕಿನ, ಐತಿಹಾಸಿಕ ಚಿಕ್ಕಸಂಗಮದಲ್ಲಿರುವ, ಶ್ರೀ ಸಂಗಮನಾಥ ದೇವಸ್ಥಾನಕ್ಕೆ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷ, ಶಾಸಕ, ಜೆ.ಟಿ.ಪಾಟೀಲ ಭೇಟಿ ನೀಡಿ, ಮೂಲ ಸೌಕರ್ಯ ಪರಿಶೀಲಿಸಿದರು. ಕೃಷ್ಣ ಹಾಗೂ ಘಟಪ್ರಭಾ ನದಿಗಳ ಸಂಗಮ

ಪ್ರದೇಶದಲ್ಲಿ, ನೈಸರ್ಗಿಕ ಸೌಂದರ್ಯ, ದಟ್ಟವಾದ ಹಸಿರು ತಾಣ ಹಾಗೂ ವಿದೇಶಿ ಹಕ್ಕಿಗಳು ಪ್ರತಿ ವರ್ಷ ಚಳಿಗಾಲ ಕಳೆಯಲು, ಗಣನೀಯ ಸಂಖ್ಯೆಯಲ್ಲಿ ವಲಸೆ ಬರುವುದರಿಂದ, ಸುಸಜ್ಜಿತ ಪಕ್ಷಿಧಾಮವನ್ನು ಅಭಿವೃದ್ಧಿ ಪಡಿಸಿ, ಪ್ರವಾಸಿಗರು, ಪರಿಸರ ಆಸಕ್ತರನ್ನು ಆಕರ್ಷಿಸಲು, ಸಮಗ್ರ ಪ್ರಸ್ತಾವ ಸಲ್ಲಿಸುವಂತೆ, ಪ್ರಾಧಿಕಾರದ ಅಧಿಕಾರಿಗಳಿಗೆ, ಅವರು ಸೂಚಿಸಿದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು

<><><>

- ‘ಕೂಲಿಗಲ್ಲ, ಶಾಲೆಗೆ’ ಅಭಿಯಾನ; ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಿಂದ, ಧಾರವಾಡ ಜಿಲ್ಲೆಯಲ್ಲಿ, ಶೀಘ್ರ ಚಾಲನೆ.
- ‘ಪುಸ್ತಕದ ಗೂಡು’; ಕಲಬುರಗಿ ಜಿಲ್ಲೆಯ, 11 ತಾಲೂಕುಗಳಲ್ಲಿ, 5 ಸಾವಿರದ 97 ಪುಸ್ತಕಗಳ ಸಂಗ್ರಹ.
- ಕೇಂದ್ರದಿಂದ, ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳು, ಜಾರಿಗೆ; 29 ವಿಭಿನ್ನ ಕಾರ್ಮಿಕ ಕಾನೂನುಗಳು, ರದ್ದು.
- ‘ಖೇಲೋ ಇಂಡಿಯಾ’; ಕೊಪ್ಪಳ ಜಿಲ್ಲಾ ಕ್ರೀಡಾಂಗಣದಲ್ಲಿ, ರಾಜ್ಯದ 19 ಜಿಲ್ಲೆಗಳ, ಬಾಲಕಿಯರ ಆಯ್ಕೆ ಪ್ರಕ್ರಿಯೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>